ಅಡುಗೆ ಮನೆ ಕ್ಲೀನ್ ಮಾಡ್ತಾಳೆ. ನನಗೆ ಮಕ್ಕಳಿಗೆ ಹೋಂವರ್ಕ್ ಮಾಡಿಸಕ್ಕೆ ಬಿಡುವು ಸಿಗುತ್ತಿದೆ.'

'ನಾನು ಕೆಲಸ ಮಾಡಲ್ಲಾಂತ ಹೇಳ್ತಿದ್ದೀರಾ?'

'ಹೌದು. ಹೋಂ ಸೈನ್ಸ್ ಗ್ರಾಜುಯೇಟ್ ನೀನು. ಕಾಫಿ ಮಾಡಕ್ಕೂ ಬರಲ್ಲ. ತರಕಾರಿಗಳ ಹೆಸರು ಗೊತ್ತಿದೆಯಾ? ಚಪಾತಿ ಯಾವ ಹಿಟ್ಟಿನಿಂದ ಮಾಡ್ತಾರೆ ಗೊತ್ತಿದೆಯಾ? ಒಂದು ದಿನವಾದರೂ ನನ್ನ ಮಕ್ಕಳಿಗೆ ಶಾಲೆಗೆ ಹೋಗಲು ಸಹಾಯ ಮಾಡಿದ್ದೀಯಾ? ಹೋಂ ವರ್ಕ್ ಮಾಡಿಸಿದ್ದೀಯ? ನನಗೂ ಸಾಕಾಗಿದೆ. ನಾವು ಈ ತಿಂಗಳ ನಂತರ ಬೇರೆ ಹೋಗಬೇಕೂಂತಿದ್ದೇವೆ.'

'ಅಮ್ಮ–ಅಪ್ಪ ಒಪ್ಪಿದ್ದಾರಾ?' ಆಶ್ಚರ್ಯದಿಂದ ಪೂರ್ವಿ ಕೇಳಿದಳು.

'ಅಮ್ಮ–ಅಪ್ಪನ ಒಪ್ಪಿಗೆ ಅನಗತ್ಯ. ಇನ್ನು ಮೇಲೆ ನಾವ್ಯಾರೂ ನಿನ್ನ ಮದುವೆ ವಿಚಾರದಲ್ಲಿ ಪ್ರವೇಶಿಸಲ್ಲ. ನಾನೇ ಶಶಾಂಕ್‌ಗೆ ವಿಷಯ ತಿಳಿಸ್ತೀನಿ. ಅಪ್ಪ–ಅಮ್ಮಾನೇ ನಿನಗೆ ಬೇರೆ ಗಂಡು ಹುಡುಕ್ತಾರೆ.'

ಪೂರ್ವಿ ಪೆಚ್ಚಾದಳು.

'ಶಾಲಿನಿಗೂ ತುಂಬಾ ಬೇಜಾರಾಗಿದೆ. ಅವಳೂ ಬೇರೆ ಹೋಗಬಹುದು' ಎಂದಳು ಅನುಪಮಾ.

***

ರಾತ್ರಿ ಪೂರ್ವಿ ಮಾತನಾಡದೆ ಊಟ ಮಾಡಿದಳು. ಗಂಡನ ಬಳಿ ಅನುಪಮಾ ಹೇಳಿದಳು. 'ತುಂಬಾ ಜೋರಾಯ್ತೇನೋ ನಾನು ಗದರಿದ್ದು?'

'ಕಬ್ಬಿಣ ಕಾದಾಗಲೇ ಬಡಿಯಬೇಕು. ನಾವು ಮಾಡ್ತಿರೋದು ಅವಳ ಒಳ್ಳೆಯದಕ್ಕೆ ತಾನೆ?'

ರಾತ್ರಿ ತಾಯಿ–ಮಗಳು ತುಂಬಾ ಹೊತ್ತು ಮಾತಾಡುತ್ತಿದ್ದುದನ್ನು ಅನುಪಮಾ ಗಮನಿಸಿದಳು. ಮರುದಿನ ಸೋಮವಾರ ಎಂದಿನಂತೆ ಅನುಪಮಾ ತಿಂಡಿ ಮಾಡಿದಳು. ಮಕ್ಕಳನ್ನು ಸ್ಕೂಲ್‌ಗೆ ಕಳಿಸಿ ಅವಳು ತಿಂಡಿ ತಿನ್ನುತ್ತಿದ್ದಾಗ ಗಿರಿಜಮ್ಮ ಕೇಳಿದರು. 'ಇವತ್ತೇನು ಅಡುಗೆ ಮಾಡ್ತೀಯ ಅನುಪಮಾ?'

'ಮಕ್ಕಳಿಗೆ, ನಿಮ್ಮ ಮಗನಿಗೆ ಡಬ್ಬಿಗೆ ಪುಳಿಯೋಗರೆ, ಮೊಸರನ್ನ ಹಾಕಿ ಕಳಿಸಿದ್ದೀನಿ. ಮಧ್ಯಾಹ್ನ ಊಟಕ್ಕೆ ನಾವಿಷ್ಟೇ ಜನ ಅಲ್ವಾ? ಅನ್ನ, ಸಾರು ಮಾಡ್ತೀನಿ.'

'ನಿನ್ನ ಗಂಡ ಊಟಕ್ಕೆ ಬರಲ್ವಾ?'

'ಇಲ್ಲ ಅತ್ತೆ. ಮೂರು ಗಂಟೆಗೆ ಒಂದು ಮೀಟಿಂಗ್ ಇದೆಯಂತೆ. ನನಗೂ ಡಬ್ಬಿಗೆ ಊಟ ಹಾಕಿಕೊಡು ಅಂದ್ರು.'

'ಅನ್ನ, ಸಾರು ನಾನೇ ಮಾಡ್ತೀನಿ. ನೀನು ಬೇರೆ ಕೆಲಸವಿದ್ದರೆ ನೋಡಿಕೋ.'

'ಥ್ಯಾಂಕ್ಸ್ ಅತ್ತೆ' ಎಂದಳು ಅನುಪಮಾ.

ಗಿರಿಜಮ್ಮ ಮಗಳನ್ನು ಕರೆದು ಅನ್ನ, ಸಾರು ಮಾಡುವುದು ಹೇಗೆ ಎಂದು ಹೇಳಿಕೊಡುತ್ತಾ, ಅವಳ ಕೈಯಲ್ಲೇ ಅಡುಗೆ ಮಾಡಿಸಿದರು.

ಪೂರ್ವಿ ಅಡುಗೆ ಪೂರೈಸಿ ಜ್ಯೂಸ್ ಕುಡಿದು ಸುಧಾರಿಸಿಕೊಂಡಳು. ಮಧ್ಯಾಹ್ನದ ಊಟವಾಯಿತು. ಅನುಪಮಾ 'ನಿಮ್ಮ ಕೈ ಅಡುಗೆ ರುಚೀನೇ ಮರೆತುಹೋಗಿತ್ತು ಅತ್ತೆ' ಎಂದಳು.

ಊಟದ ನಂತರ ಪೂರ್ವಿ ಮಲಗಿ ರೆಸ್ಟ್ ತೆಗೆದುಕೊಂಡಳು. ಅವಳು 5.30ಕ್ಕೆ ಹೊರಗೆ ಬಂದಾಗ ಎಲ್ಲರೂ ಕಾಫಿ ಕುಡಿಯುತ್ತಾ ಕುಳಿತಿದ್ದರು. ಅನುಪಮಾ ಪೂರ್ವಿಗೂ ಕಾಫಿ ತಂದುಕೊಟ್ಟಳು. ಕಾಫಿ ಪ್ರೋಗ್ರಾಂ ನಂತರ ಗಿರಿಜಮ್ಮ ತರಕಾರಿ ಬುಟ್ಟಿ ತಂದರು.

'ಬದನೆಕಾಯಿ ಹೆಚ್ಚು. ರಾತ್ರಿ ಪಲ್ಯ ಮಾಡೋಣ.'

'ಹೋಗಮ್ಮ ನಾನು ಮಾಡಲ್ಲ.'

'ನೀನು ಇನ್ನು ಮೇಲೆ ನಾನು ಹೇಳಿದ ಹಾಗೆ ಕೇಳಬೇಕು. ನಿಮ್ಮಣ್ಣಂದಿರು, ಅತ್ತಿಗೆಯರು ಯಾರೂ ನಿನಗೆ ಸಪೋರ್ಟ್ ಮಾಡಲ್ಲ. ನೀನು ಮೊಂಡತನ ಮಾಡಿದರೆ, ನಾನೂ ನಿನಗೆ ಸಪೋರ್ಟ್ ಮಾಡಲ್ಲ.'

ಗಿರಿಜಮ್ಮ ಮಗಳಿಗೆ ತಾಳ್ಮೆಯಿಂದ ಬದನೆಕಾಯಿ ಹೆಚ್ಚುವುದನ್ನು ಹೇಳಿಕೊಟ್ಟು ತಾವೇ ನಿಂತು ಅವಳ ಕೈಯಲ್ಲಿ ಪಲ್ಯ ಮಾಡಿಸಿದರು. ನಂತರ ಚಪಾತಿ ಹಿಟ್ಟು ಕಲಿಸುವುದನ್ನು ಹೇಳಿಕೊಟ್ಟರು. ಏಳು ಗಂಟೆಯ ಹೊತ್ತಿಗೆ ಶಾಲಿನಿ ಬಂದಳು. ಗಿರಿಜಮ್ಮ 'ಮದುವೆ ಚೆನ್ನಾಗಿ ಆಯಿತಾ?' ಎಂದು ವಿಚಾರಿಸಿದರು. ಬಹಳ ಅಕ್ಕರೆಯಿಂದ ಮಾತನಾಡಿಸಿದರು.

'ಪೂರ್ವಿ ಹೋಗು. ನಿನ್ನ ಅತ್ತಿಗೆಗೆ ಕಾಫಿ ತೆಗೆದುಕೊಂಡು ಬಾ' ಎಂದರು. ಪೂರ್ವಿ ತಾನೇ ಕಾಫಿ ಮಾಡಿ ತಂದಾಗ ಶಾಲಿನಿ ಆಶ್ಚರ್ಯದಿಂದ ಹುಬ್ಬೇರಿಸಿದಳು.

ಸಾಯಂಕಾಲ ತಾಯಿ–ಮಗಳು ಸೇರಿ ಚಪಾತಿ ಮಾಡಿದರು. ಶಾಲಿನಿ, ಅನುಪಮಾ ಆರಾಮವಾಗಿ ಕುಳಿತು ಊಟ ಮಾಡಿದರು.

ಮರುದಿನ ಬೆಳಿಗ್ಗೆ ಅನುಪಮಾ, ಶಾಲಿನಿ ಬೆಳಗಿನ ತಿಂಡಿಗೆ ರೆಡಿ ಮಾಡುತ್ತಿದ್ದಾಗ, ಪೂರ್ವಿಯೂ ಬಂದು ತರಕಾರಿ ಹೆಚ್ಚಲು ಸಹಾಯ ಮಾಡಿದಳು.

'ಖಾರಾಭಾತ್ ಮಾಡ್ತೀನಿ. ಮಕ್ಕಳಿಗೆ ಡಬ್ಬಿಗೆ ಏನು ಹಾಕಲಿ ಶಾಲಿನಿ?'

'ಸ್ಯಾಂಡ್‌ವಿಚ್ ಮಾಡಿಕೊಡ್ತೀನಿ ಬಿಡಿ.'

'ಅತ್ತಿಗೆ ನನಗೂ ಸ್ಯಾಂಡ್‌ವಿಚ್ ಮಾಡುವುದು ಹೇಳಿಕೊಡಿ' ಪೂರ್ವಿ ಕೇಳಿದಳು.

ತಿಂಡಿಯ ಕಾರ್ಯಕ್ರಮ ನಡೆಯುವಾಗ ಗಿರಿಜಮ್ಮ ಹೇಳಿದರು. 'ಅಡುಗೆ ನಾನೇ ಮಾಡ್ತೀನಿ ಅನುಪಮಾ. ನೀನು ಬೇರೆ ಏನಾದರೂ ಕೆಲಸ ಮಾಡಿಕೋ.'

'ಶಾಲಿನಿ ಇವತ್ತು ರಜಾ ಹಾಕಿದ್ದಾಳೆ. ನಾನು, ಅವಳು ಶಾಪಿಂಗ್ ಮಾಡ್ತೇವೆ.'

'ಹಾಗೇ ಮಾಡಿ' ಎಂದರು ಗಿರಿಜಮ್ಮ.

ಇಬ್ಬರೂ ರೆಡಿಯಾಗಿ ಹೊರಟರು. ಆಟೊ ಹತ್ತಿದೊಡನೆ ಅನುಪಮಾಳನ್ನು ಶಾಲಿನಿ ಕೇಳಿದಳು. 'ಅಕ್ಕಾ ಅತ್ತೆ ಯಾಕೆ ಮೆತ್ತಗಾಗಿದ್ದಾರೆ?'

'ಅದರ ಕಾರಣ ಹೇಳ್ತೀನಿ. ನಾವು ಏನ್ಮಾಡಬೇಕು ಅನ್ನುವುದನ್ನೂ ಹೇಳ್ತೀನಿ. ಅದಕ್ಕೆ ನಿನ್ನನ್ನು ಹೊರಗೆ ಕರೆದುಕೊಂಡು ಬಂದಿದ್ದು.'

ಅವರಿಬ್ಬರೂ ಮನೆಗೆ ವಾಪಸ್ಸು ಬಂದಾಗ 2 ಗಂಟೆಯಾಗಿತ್ತು. ಗಿರಿಜಮ್ಮ ಅನ್ನ, ಕೂಟು, ತಿಳಿಸಾರು ಮಾಡಿ ಹಪ್ಪಳ, ಸಂಡಿಗೆ ಕರಿದಿದ್ದರು.

'ಅತ್ತೆ ಕೂಟು ತುಂಬಾ ಚೆನ್ನಾಗಿದೆ. ರಾತ್ರಿ ಮಕ್ಕಳು ಊಟ ಮಾಡ್ತಾರೆ. ನಮಗೆ ಮಾತ್ರ ಚಪಾತಿ ಮಾಡ್ತೇನೆ' ಅನುಪಮಾ ಹೇಳಿದಳು.

'ಹೌದು ಅತ್ತೆ ಕೂಟು ತುಂಬಾ ಚೆನ್ನಾಗಿದೆ' ಎಂದಳು ಶಾಲಿನಿ.

***

ಸಾಯಂಕಾಲ ಶಾಲಿನಿ ತಮ್ಮನಿಗೆ ಫೋನ್ ಮಾಡಿದಳು.

'ಎಲ್ಲಿದ್ದೀಯೋ?'

'ಈಗ ಮನೆಗೆ ಬಂದೆ ಅಕ್ಕ. ಪುನಃ ಆರು ಗಂಟೆಗೆ ಹೊರಡಬೇಕು.'

'ಐದೂ ಮೂವತ್ತಕ್ಕೇ ಹೊರಡು. ನಾನು ಕ್ಲಿನಿಕ್‌ಗೆ ಬರ್ತೀನಿ. ನಿನ್ನ ಹತ್ತಿರ ಮಾತಾಡಬೇಕು.'

'ಅಕ್ಕ ಯಾರಿಗೆ ಹುಷಾರಿಲ್ಲ?'

'ಬಂದ ಮೇಲೆ ಹೇಳ್ತೀನಿ.'

ಶಾಲಿನಿ ಕ್ಲಿನಿಕ್ ಪ್ರವೇಶಿಸಿದಳು. ಒಬ್ಬ ರಿಸೆಪ್ಷನಿಸ್ಟ್ ಅವಳನ್ನು ಸ್ವಾಗತಿಸಿ ಕೇಳಿದಳು, 'ಯಾವ ಡಾಕ್ಟರನ್ನು ಭೇಟಿ ಮಾಡಬೇಕು?'

'ಡಾ. ಶಶಾಂಕ್.'

'ನಿಮ್ಮ ಟೋಕನ್ ನಂ.1. ನೀವು 3ನೇ ನಂಬರ್ ರೂಮ್‌ನ ಹತ್ತಿರ ಕುಳಿತುಕೊಳ್ಳಿ.'

ಶಾಲಿನಿ ನಗುತ್ತಾ ಟೋಕನ್ ತೆಗೆದುಕೊಂಡಳು. ಶಶಾಂಕ್ 2 ನಿಮಿಷಗಳಲ್ಲಿ ಅಲ್ಲಿಗೆ ಬಂದ.

'ನಮ್ಮಕ್ಕ ಬಂದಿದ್ದಾರಾ ಸೀಮಾ?'

'ಅವರ ಹೆಸರೇನು?'

'ಶಾಲಿನಿ ರಾವ್.'

'ಬಂದಿದ್ದಾರೆ. ಸಾರಿ ಡಾಕ್ಟರ್...'

'ಇಟ್ಸ್ ಓ.ಕೆ...' ಎಂದು ಹೇಳಿ ತನ್ನ ರೂಮ್ ಪ್ರವೇಶಿಸಿದ.

'ಅಕ್ಕಾ ಏನು ಸಮಾಚಾರ?'

'ನನ್ನ ಪ್ರಶ್ನೆಗಳಿಗೆ ನೇರವಾದ ಉತ್ತರ ಕೊಡ್ತೀಯಾ?'

'ಖಂಡಿತಾ... ಏನು ನಿನ್ನ ಪ್ರಶ್ನೆಗಳು?'

'ನೀನು, ಪೂರ್ವಿ ಜಗಳವಾಡಿದ್ದೀರಾ?'

'ನನಗೆ ಜಗಳವಾಡಕ್ಕೇ ಬರಲ್ಲವಲ್ಲಾ? ಯಾಕೆ ಹೀಗೆ ಕೇಳ್ತಿದ್ದೀಯಾ?'

'ಅವಳು ಈ ಮದುವೆ ಬೇಡಾಂತಿದ್ದಾಳೆ.'

'ಯಾಕಂತೆ?'

ಅವಳು ವಿವರವಾಗಿ ಹೇಳಿದಳು. ಶಶಾಂಕ್ ನಗುತ್ತಾ ಹೇಳಿದ.

'ಅವಳು ಹೇಳಿದ್ರಲ್ಲಿ ತಪ್ಪಿಲ್ಲ. ನನಗೆ ಶಾಪಿಂಗ್, ಪಾನಿಪೂರಿ ರಸ್ತೆಯಲ್ಲಿ ತಿನ್ನೋದರಲ್ಲಿ ಆಸಕ್ತಿಯಿಲ್ಲ.'

'ನಿನ್ನ ಮದುವೆಯಾಗುವ ಹುಡುಗಿ, ಅಲಂಕಾರ ಮಾಡಿಕೊಂಡು ನಿನ್ನ ಮುಂದೆ ನಿಂತರೆ ಚೆನ್ನಾಗಿ ಕಾಣ್ತಿದ್ದೀಯಾಂತ ಹೇಳಕ್ಕೂ ಆಗಲ್ವಾ ನಿನಗೆ?'

'ನನಗೆ ಅದೆಲ್ಲಾ ಅಭ್ಯಾಸವಿಲ್ಲಕ್ಕ.'

'ಅಭ್ಯಾಸ ಮಾಡಿಕೋಬೇಕು. ಈಗ ನಮ್ಮತ್ತೆ ಅವಳಿಗೆ ಬುದ್ಧಿ ಹೇಳಿ ಅಡುಗೆ–ತಿಂಡಿ ಕಲಿಸ್ತಿದ್ದಾರೆ. ನಿನಗೆ ನಿಜವಾಗಿ ಅವಳು ಇಷ್ಟವಾಗಿದ್ದಾಳಾ?'

'ಪೂರ್ವಿ ತುಂಬಾ ಒಳ್ಳೆಯ ಹುಡುಗಿ. ಅವಳಿಗೆ ಬಡವರ ಬಗ್ಗೆ ನನಗಿಂತ ಹೆಚ್ಚಿನ ಅನುಕಂಪವಿದೆ. ನನಗಿಂತ ಹೆಚ್ಚಿನ ಸಹಾಯ ಮಾಡ್ತಾಳೆ. ನನಗೆ ಅವಳ ಆ ಗುಣಾನೇ ತುಂಬಾ ಇಷ್ಟ.'

'ಅವಳು ಬಡವರಿಗೆ ಸಹಾಯ ಮಾಡ್ತಾಳಾ?'

'ಹೌದು. ಒಂದು ಭಾನುವಾರ ನಾನು ಅವಳ ಒತ್ತಾಯಕ್ಕೆ ಸಿನಿಮಾಕ್ಕೆ ಹೊರಟಿದ್ದೆ. ಅವಳೇ ಟಿಕೆಟ್ಸ್ ಬುಕ್ ಮಾಡಿದ್ದಳು. ಅಷ್ಟು ಹೊತ್ತಿಗೆ ನನಗೊಂದು ಫೋನ್ ಬಂತು.'

'ಯಾರ ಫೋನ್?'